## 10. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಿದರಕೊಪ್ಪ, ಶಿಕಾರಿಪುರ

**3 ವರ್ಷಗಳ ಅವಧಿಯಲ್ಲಿ ಶೇ 60 ರಿಂದ ಶೇ 80 ರಷ್ಟು ಕಲಿಕಾ ಮಟ್ಟದಲ್ಲಿ ಹಾಗೂ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವೆ ಭಯರಹಿತ ಸ್ನೇಹಮಯ ವಾತಾವರಣ ನಿರ್ಮಾಣ ಮಾಡುವುದು. ಶಿಕ್ಷಣ ಮಾನವನ ವ್ಯಕ್ತಿತ್ವಕ್ಕೆ ಒಂದು ರೂಪವನ್ನು ಹೊಳಪನ್ನು ನೀಡುವ ಕ್ರೀಯೆ ನಡೆದಷ್ಟು ದಾರಿಯಿದೆ ಪಡೆದಷ್ಟು ಶಿಕ್ಷಣವಿದೆ ಶಿಕ್ಷಣ ಪಡೆಯಲು ಅಥವಾ ಕಲಿಯಲು ಆರಂಭವಿದೆಯೇ ಹೊರತು ಅಂತ್ಯವೆಂಬುದಿಲ್ಲ.**




ಶಿವಶರಣರ ನಾಡು ಶಿಕಾರಿಪುರದಿಂದ ಸುಮಾರು 30 ಕಿ.ಮೀ ದೂರದ, ಗಡಿಬಾಗದಲ್ಲಿರುವ ಅತಿ ಸಣ್ಣ ಗ್ರಾಮ ಬಿದರಕೊಪ್ಪ ಈ ಗ್ರಾಮದಲ್ಲಿ ಸ.ಕಿ.ಪ್ರಾ.ಶಾಲೆ ಪ್ರಾರಂಭವಾದದ್ದು 1961 ರಲ್ಲಿ. ಇಲ್ಲಿನ ಗ್ರಾಮಸ್ಥರು ಲಂಬಾಣಿ (ಬಂಜಾರ) ಜನಾಂಗಕ್ಕೆ ಸೇರಿದವರಾಗಿದ್ದು, ಅನಕ್ಷರಸ್ಥರಿರುವ ಹಾಗೂ ಹೊಟ್ಟೆ ಪಾಡಿಗಾಗಿ ಕೂಲಿ ಕೆಲಸವನ್ನೇ ಆಶ್ರಯಿಸಿಕೊಂಡಿರುವ ಕುಟುಂಬಗಳೇ ಹೆಚ್ಚು. ಇಂತಹ ಕುಟುಂಬಗಳಿಂದ ಜ್ಞಾನದ ಹಸಿವಿನಿಂದ ಬಂದ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನದ ದಾಹವನ್ನು ನೀಗಿಸುವುದೇ ಶಿಕ್ಷಕರಿಗೆ ಪುಣ್ಯದ ಕೆಲಸ ಇಲ್ಲಿನ ಮಕ್ಕಳ ಮಾತೃಭಾಷೆ ಬೇರೆಯಾಗಿರುವುದರಿಂದ ಕಲಿಕೆಯುಂಟು ಮಾಡಲು ನಿರಂತರ ಪರಿಶ್ರಮಪಡುತ್ತಲೇ ಬಂದಿರುವ ಶಿಕ್ಷಕರು ಹಲವರು ಪ್ರಸ್ತುತ ಈ ಶಾಲೆಯಲ್ಲಿ 3 ಜನ ಮಹಿಳಾ ಶಿಕ್ಷಕಿಯರಿದ್ದು 1 ರಿಂದ 5 ನೇ ತರಗತಿಯಲ್ಲಿ 75 ವಿದ್ಯಾರ್ಥಿಗಳನ್ನು ಶಾಲೆ ಒಳಗೊಂಡಿರುತ್ತದೆ. ಈ ಶಾಲೆಯಲ್ಲಿ ಇಲಾಖೆಯ ಎಲ್ಲಾ ಪ್ರೋತ್ಸಾಹದಾಯಕ ಯೋಜನೆಗಳು ಫಲ ಪ್ರದವಾಗಿವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

**"ನಮ್ಮ ಶಾಲೆಯು ಆಕರ್ಷಿಸುವ ಪ್ರಮುಖ ಅಂಶಗಳು,**





**ಶಾಲಾ ಕೈತೋಟ** :ಶಾಲೆಯ ಕಡೆ ಎಲ್ಲರ ಚಿತ್ತವನ್ನು ಆಕರ್ಷಿಸುವ ಮುಖ್ಯ ಭಾಗವೆಂದರೆ ನಮ್ಮ ಶಾಲಾ ಕೈತೋಟ ಶಿಕ್ಷಕಿಯರು ಹಾಗು ಮಕ್ಕಳ ಸಹಭಾಗಿತ್ವದಲ್ಲಿ ನಿರ್ಮಿಸಲಾಗುತ್ತಿರುವ ಶಾಲಾ ಕೈತೋಟದಲ್ಲಿ ವಿವಿಧ ರೀತಿಯ ಅಲಂಕಾರಿಕ ಗಿಡಗಳು ಹೂವಿನ ಗಿಡಗಳಾದ ದಾಸವಾಳ, ಮಲ್ಲಿಗೆ, ಗುಲಾಬಿ ,ಸಂಪಿಗೆ ,ವಿವಿಧ ಬಣ್ಣಗಳ ಚಂಡು ಹೂವುಗಳು ಹಾಗೂ ಹಣ್ಣಿನ ಗಿಡಗಳಾದ ಬಾಳೆ,ಮಾವು,ನಿಂಬೆ,ಪೇರಲ ಮತ್ತು ಪಪ್ಪಾಯಿ ವಿವಿಧ ತರಹದ ಸೋಪ್ಪುಗಳನ್ನು ಬೆಳೆಸಿದ್ದು ಅವುಗಳನ್ನು ಅಕ್ಷರ ದಾಸೋಹ ಯೋಜನೆಗೆ ಬಳಸಲಾಗುತ್ತಿದೆ ಶಿಕ್ಷಕಿಯರ ಮಾರ್ಗದರ್ಶನದಲ್ಲಿ ಕೈತೋಟವನ್ನು ಹಿರಿಯ ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ನಿರ್ವಹಿಸುತ್ತಿದ್ದಾರೆ.

**ನಲಿ–ಕಲಿ ಕೊಠಡಿಯ ವಿಶೇಷತೆ**

ನಲಿಕಲಿ ಕೊಠಡಿ ಯಲ್ಲಿ ಎಲ್ಲಾ ಮಕ್ಕಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಗ್ರಾಮ ಪಂಚಾಯ್ತಿ ಸದಸ್ಯರ ಹಾಗು ಎಸ್.ಡಿ.ಎಮ್ .ಸಿ ಅಧ್ಯಕ್ಷರು ಹಾಗೂ ಸದಸ್ಯರ ಸಹಕಾರದಿಂದ ಕುರ್ಚಿಗಳ ವ್ಯವಸ್ಥೆ ಮಾಡಿರುತ್ತಾರೆ ಶಾಲಾ ಶಿಕ್ಷಕಿಯರು ಹಾಗೂ ದಾನಿಗಳು ಸ್ವತಃ ತಮ್ಮ ಖರ್ಚಿನಲ್ಲಿಯೇ ನಲಿಕಲಿ ಕೊಠಡಿಗೆ 5 ಟೇಬಲ್‌ಗಳ ವ್ಯವಸ್ಥೆ ಮಾಡಿರುತ್ತಾರೆ ನಲಿಕಲಿ ಶಿಕ್ಷಕಿಯರು ವಿವಿಧ ರೀತಿಯ ಕಲಿಕೋಪಕರಣಗಳನ್ನು ತಯಾರಿಸಿ ತರಗತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ.

**ಮಕ್ಕಳ ಪ್ರತಿಭೆಯ ಅನಾವರಣ** :– ಪ್ರತಿ ವರ್ಷ ಪ್ರತಿಭಾಕಾರಂಜಿಯಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಾದ ಕೋಲಾಟ, ಜಾನಪದ ನೃತ್ಯ,





ಛದ್ಮವೇಷ ದೇಶಭಕಿ ಗೀತೆ ಚಿತ್ರಕಲೆ ಸ್ಪರ್ಧೆಗಳಲ್ಲಿ ಕ್ಲಸ್ಟರ್ ಹಂತದಲ್ಲಿ ವಿಜೇತರಾಗಿ ತಾಲ್ಲೂಕು ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡಿ ಪೋಷಕರಿಂದ ಮೆಚ್ಚುಗೆ ಪಡೆದಿರುತ್ತಾರೆ ಅದರಲ್ಲಿ ವಿಶೇಷವಾಗಿ ಚಿತ್ರಕಲೆ ಸ್ಪರ್ಧೆಯಲ್ಲಿ ಮನೋಜ್ ಎಂಬ ವಿದ್ಯಾರ್ಥಿಯು ಸತತ ಎರಡು ಬಾರಿ ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿಗೆ ಆಯ್ಕೆಯಾಗಿ ಉತ್ತಮ ಕಲೆಯನ್ನು ಪ್ರದರ್ಶಿಸಿರಿತ್ತಾನೆ ಎಂದು ಹೇಳಲು ಹರ್ಷವೆನಿಸುತ್ತದೆ





**ಸುಸಜ್ಜಿತ ಅಡುಗೆ ಕೋಣೆ :-** ಅಕ್ಷರ ದಾಸೋಹದ ಅಡುಗೆ ಕೋಣೆಯಲ್ಲಿಯೇ ಸಿಂಟೆಕ್ಸ್ ವ್ಯವಸ್ಥೆಯನ್ನು ಮಾಡಲಾಗಿದ್ದು ಪ್ರತಿ ವಾರಕ್ಕೊಮ್ಮೆ ಸಿಂಟೆಕ್ಸ್ ನ್ನು ಸುಲಭವಾಗಿ ಸ್ವಚ್ಚಗೊಳಿಸಲು ಅನುಕೂಲವಾಗಿದೆ ಇದರಿಂದ ಶುದ್ದ ನೀರಿನ ವ್ಯವಸ್ಥೆ ಕಲ್ಪಿಸಲು ಸಹಾಯಕವಾಗಿದೆ ಅಡುಗೆಯವರು ಸಹ ಅಡುಗೆ ಕೋಣೆಯನ್ನು ಸ್ವಚ್ಚವಾಗಿರಿಸಿ ಶುದ್ಧ ಆಹಾರ ತಯಾರಿಸಿ ಮಕ್ಕಳಿಗೆ ಉಣಬಡಿಸುತ್ತಿದ್ದಾರೆ.





**“ಆರೋಗ್ಯಕರ ಶಾಲಾ ಪರಿಸರ”**




ನಮ್ಮ ಶಾಲೆಗೆ ಬರುವ ಬಹುತೇಕ ಮಕ್ಕಳು ಕೂಲಿ ಕೆಲಸಗಾರರ ಮಕ್ಕಳಾಗಿದ್ದು ಪೋಷಕರ ಕೆಲಸದ ಒತ್ತಡದ ಕಾರಣ ಮಕ್ಕಳ ವೈಯಕ್ತಿಕ ಸ್ವಚ್ಚತೆಯ ಕಡೆ ಗಮನಹರಿಸುವಲ್ಲಿ ವಿಫಲರಾಗಿದ್ದು ಮಕ್ಕಳಲ್ಲಿ ಆರೋಗ್ಯದ ಅರಿವು ಮೂಡಿಸಲು ಆಗಾಗ್ಗೆ ಆರೋಗ್ಯ ಇಲಾಖೆಯವರನ್ನು ಕರೆಸಿ ಅವರಿಗೆ ಶುದ್ದ ಆಹಾರ ನೀರು ಹಾಗೂ ವೈಯಕ್ತಿಕ ಸ್ವಚ್ಚತೆಯ ಬಗ್ಗೆ ಸೂಕ್ತ ಸಲಹೆ ಹಾಗು ಮಾರ್ಗದರ್ಶನ ನೀಡಲಾಗುತ್ತಿದೆ ಗ್ರಾಮದ ಆಶಾ ಕಾರ್ಯಕರ್ತರು.

ಶಾಲೆಗೆ ಭೇಟಿನೀಡಿ ಮಕ್ಕಳು ಆರೋಗ್ಯದ ದೃಷ್ಟಿಯಿಂದ ಊಟಕ್ಕೆ ಮೊದಲು ಕೈತೊಳೆಯುವ 6 ಹಂತಗಳ ವಿಧಾನವನ್ನು ತೋರಿಸಿರುತ್ತಾರೆ ಅಂದರಂತೆ ಮಕ್ಕಳು ಪ್ರತಿದಿನ ಸಾಬೂನಿಂದ ಕೈ ತೊಳೆಯುವ ಅಭ್ಯಾಸವನ್ನು ಹೊಂದಿರುತ್ತಾರೆ.

ಹೀಗೆ ನಮ್ಮ ಶಾಲೆಯ ಯಶಸ್ಸಿಗೆ ಕಾರಣೀಬೂತರಾದ ಮುಖ್ಯ ಶಿಕ್ಷಕಿಯರಾದ ಶ್ರೀಮತಿ ಮಂಜುಳಾಕ್ಷಿ ವಿ.ಎಮ್ ಎಮ್.ಎ, ಬಿ.ಎಡ್, ಕಳೆದ 22 ವರ್ಷಗಳಿಂದ ನಿಸ್ವಾರ್ಥ ಸೇವೆ ಸಲ್ಲಿಸುತ್ತಾ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿದ್ದಾರೆ, ಹಿರಿಯರು ಅನುಭವಿಗಳೂ ಉತ್ಸಾಹಿಗಳು ಆದ ಶ್ರೀಮತಿ ಗಿರಿಜಮ್ಮ ಬಿ ಹೆಚ್ ರವರು ಹಾಗೂ ಮತ್ತೊಬ್ಬ ಶಿಕ್ಷಕಿಯರಾದ ಶ್ರೀಮತಿ ವೀಣಾ ಕೆ. ಎನ್ ರವರು ಶಾಲೆಯ ಎಸ್.ಡಿ.ಎಂ.ಸಿ ಯವರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರು ಇವರ ಶ್ರಮ ಎಲ್ಲರು ಸ್ಮರಿಸುವಂತದ್ದು.


